C.MIS No. 8/2017 PW-1

<u>ದಿನಾಂಕ **21.12.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿಸವಾಲುಃ ಎದುರುದಾರರ ಪರ ಶ್ರೀ ಜೆ. ಪಿ ವಕೀಲರಿಂದಃ</u>

ಮದುವೆಯ ಸಮಯದಲ್ಲಿ ಎದುರುದಾರರ ಎಲ್ಕ್ಟಿಕ್ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಮದುವೆಯ ಸಮಯದಲ್ಲಿ ಎದುರುದಾರರ ಮನೆಯವರು ಮುತ್ತಿನ ಓಲೆ, ಮಾಂಗಲ್ಯ ಚೈನ್, 2 ಬಳೆ ಮತ್ತು ಕೈ ಉಂಗುರವನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ಮಾಂಗಲ್ಯ ಚೈನ್ ಮತ್ತು ಓಲೆಯನ್ನು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಮದುವೆಯ ನಂತರ ನಾನು ಮತ್ತು ಎದುರುದಾರರು ಬೆಂಗಳೂರಿನ ಬಾಡಿಗೆ ಮನೆಯಲ್ಲಿ ವೈವಾಹಿಕ ಜೀವನ ಪ್ರಾರಂಭ ಮಾಡಿದೆವು ಎಂದರೆ ನಿಜ. 2006 ರಲ್ಲಿ ಒಂದು ಹೆಣ್ಣು ಮಗು ಜನಿಸಿತು ಎಂದರೆ ನಿಜ. ಮಗು ಜನನ ಆದ 15 ದಿವಸಗಳ ನಂತರ ನಮ್ಮ ತಾಯಿಯ ಮನೆಯಾದ ತೆಂಗಿನ ಕಲ್ಲುವಿಗೆ ಹೋಗಿದೆ ಎಂದರೆ ನಿಜ. ನಂತರ ಬೆಂಗಳೂರಿನ ಮನೆಯಲ್ಲಿ ವೈವಾಹಿಕ ಜೀವನ ಪ್ರಾರಂಭ ಮಾಡಿದೆವು ಎಂದರೆ ನಿಜ. ನಂತರ 2 ನೇ ಮಗ ಆಯಿತು ಎಂದರೆ ನಿಜ. ನಂತರ ಮಗು ಜನನ ಆದ ನಂತರ ಬೆಂಗಳೂರಿನ ಬೈರವಿ ನಗರದಲ್ಲಿ ಜೀವನ ಮುಂದುವರೆಸಿದೆವು ಎಂದರೆ ನಿಜ. ಈ ಸಮಯದಲ್ಲಿ ಎದುರುದಾರರು ಚೆನ್ನಾಗಿ ಸಂಪಾದನೆ ಮಾಡುತ್ತಿದ್ದರು ಎಂದರೆ ನಿಜ. ಈ ಸಮಯದಲ್ಲಿ ನನಗೆ ಎದುರುದಾರರು ಉಳಿತಾಯ ಮಾಡಲು ಹಣ ಕೊಡುತ್ತಿದ್ದರು ಎಂದರೆ ಸುಳ್ಳು. ಆಗ 1,25,000/- ನನ್ನ ಬಳಿ ಇತ್ತು ಎಂದರೆ ಸುಳ್ಳು. ಎದುರುದಾರರು ನನಗೆ ಬಂಗಾರದ ಒಡವೆಗಳನ್ನು ಮಾಡಿಸಿಕೊಟ್ಟಿದ್ದರು ಎಂದರೆ ಸುಳ್ಳು. ನಾನು ಯಾವುದೇ ಚಿನ್ನದ ಒಡವೆಗಳನ್ನು ಹಾಕಿಕೊಳ್ಳುತ್ತಿರಲಿಲ್ಲ ಎಂದರೆ ಸುಳ್ಳು. ಎದುರುದಾರರಿಗೆ ಹಣದ ಅವಶ್ಯಕತೆಗಾಗಿ ನನ್ನ ಬಳಿ ಇದ್ದ 1,25,000/- ರೂಪಾಯಿಗಳನ್ನು ಕೇಳಿದ್ದರು ಎಂದರೆ ಸುಳ್ಳು. ಆ ಸಮಯದಲ್ಲಿ ನನ್ನ ಮತ್ತು ಎದುರುದಾರರ ನಡುವೆ ಜಗಳ ಆಗಿ ಪೋಲಿಸ್ ಠಾಣೆಗೆ ಹೋಯಿತು ಎಂದರೆ ಸಾಕ್ಷಿಯು ವ್ಯಯಕ್ತಿಕ ವಿಷಯಗಳಿಗೆ ಜಗಳ ಆಯಿತು ಎಂದು ಹೇಳುತ್ತಾರೆ. ದಿಃ13.10.2014 ರಲ್ಲಿ ನನ್ನ ವಿರುದ್ಧ ಎದುರುದಾರರು ಕೆಂಗೇರಿ

ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದರು ಎಂದರೆ ನಿಜ. ಈ ಬಗ್ಗೆ ನಾನು ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆಂದರೆ ಸಾಕ್ಷಿಯು ಭಯದಲ್ಲಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಈ ಹಣವನ್ನು ಧನಂಜಯ್ ಎನ್ನುವವರಿಗೆ ಕೊಟ್ಟಿದ್ದೇನೆಂದು ಹೇಳಿಕೆ ನೀಡಿರುತ್ತೇನೆಂದರೆ ಸಾಕ್ಷಿಯು ಸಾಕ್ಷಿಯು ಭಯದಲ್ಲಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಧನಂಜಯ್ ಎನ್ನುವ ವ್ಯಕ್ತಿ ನನ್ನ ಅಥವಾ ಎದುರುದಾರರ ಕುಟುಂಬಕ್ಕೆ ಸಂಬಂದಪಟ್ಟಿಲ್ಲ ಎಂದರೆ ಸಾಕ್ಷಿಯು ಆ ವ್ಯಕ್ತಿ ಯಾರೆಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ವಿಷಯಕ್ಕೆ ನನ್ನ ಸೋದರ ಮಾವ ರವರಾದ ಸುರೇಶ್ ರವರು ಪಂಚಾಯತಿ ಮಾಡಿದ್ದರು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಬೇರೆ ವಿಷಯಕ್ಕೆ ಪಂಚಾಯತಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಈ ಪಂಚಾಯತಿಯಲ್ಲಿ ಒಡವೆಗಳನ್ನು ಗಿರವಿ ಅಂಗಡಿಯಲ್ಲಿ ಇಟ್ಟಿದ್ದೇನೆಂದು ರಶೀದಿಗಳನ್ನು ನೀಡಿರುತ್ತೇನೆಂದರೆ ಸುಳ್ಳು. ಗಿರವಿ ಅಂಗಡಿಯಲ್ಲಿ 2 ಒಡವೆಗಳೂ ಮಾತ್ರ ಉಳಿದು ಕೊಂಡಿದ್ದು, ಬೇರೆಯವು ಹರಾಜಾಗಿದ್ದವು ಎಂದರೆ ಸುಳ್ಳು. ಈ ಎರಡು ಒಡವೆಗಳನ್ನು ಎದುರುದಾರರು ಬಿಡಿಸಿಕೊಟ್ಟರು ಎಂದರೆ ಸುಳ್ಳು. ನಾನು ಎದುರುದಾರನಿಗೆ ಮೋಸ ಮಾಡಿ ಧನಂಜಯ್ ಎನ್ನುವವರ ಜೊತೆ ಸೇರಿ ಅವರಿಗೆ ಸಂಪತ್ತನ್ನು ನೀಡಿರುತ್ತೇನೆಂದರೆ ಸುಳ್ಳು. ಠಾಣೆಯಲ್ಲಿ ನಾನು ಹೇಳಿಕೆ ನೀಡಿದ ನಂತರ ನನ್ನ ಮತ್ತು ಎದುರುದಾರರ ಸಂಪರ್ಕ ಇಲ್ಲ ಎಂದರೆ ಸಾಕ್ಷಿಯು ನಾನು ಅವರ ಮನೆಯಲ್ಲೇ ಇದ್ದೆ ಎಂದು ಹೇಳುತ್ತಾರೆ. ನನ್ನ ಮತ್ತು ಎದುರುದಾರರ ಮದ್ಯೆ ಸಂಪರ್ಕ ಇಲ್ಲದಿದ್ದರೂ ಈ ಸುಳ್ಳು ಅರ್ಜಿ ಹಾಕಿದ್ದೇನೆಂದರೆ ಸುಳ್ಳು. ನಾನು ಮದುವೆಯಾದ ನಂತರ  ಟೈಲರಿಂಗ್ ಕಲಿತಿದ್ದೇನೆ. ನನಗೆ ಈ ಕೆಲಸದಿಂದ ಒಳ್ಳೆಯ ಆದಾಯವಿದೆ ಎಂದರೆ ಸುಳ್ಳು.

ಎದುರುದಾರರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.